

## ಒಮ್ಮೆ ಪಟ್ಟ ಪಾಡೇ ಸಾಕು!

ಒಮ್ಮೆ ರಾವಣನನ್ನು ಭೂಲೋಕದ ಕೋರ್ಟಿಗೆ ಕರೆತಂದು, ಭಗವದ್ಗೀತೆಯನ್ನು ತೋರಿಸುತ್ತಾ, 'ಈ ಗೀತೆಯ ಮೇಲೆ ಕೈಯಿಟ್ಟು ಪ್ರಮಾಣ ಮಾಡು' ಎಂದಿದ್ದೇ ತಡ. ರಾವಣ ತಕ್ಷಣ ಗಾಬರಿಯಿಂದ ಹಿಂದೆ ಸರಿದ. ವಕೀಲ, 'ಈ ಗೀತೆಯ ಮೇಲೆ ಪ್ರಮಾಣ ಮಾಡಿದ ಮೇಲೆಯೇ ನೀನು ಸಾಕ್ಷಿ ನುಡಿಯಬೇಕು' ಎಂದ. 'ಆಗುವುದಿಲ್ಲ, ಒಮ್ಮೆ ಸೀತೆಯ ಮೇಲೆ ಕೈಯಿಟ್ಟಿದ್ದಕ್ಕೆ ಪಟ್ಟ ಪಾಡೇ ಸಾಕು, ಇನ್ನು ಗೀತೆಯ ಮೇಲೆ ಕೈಯಿಡೋದಾ? ಖಂಡಿತವಾಗಿಯೂ ಸಾಧ್ಯವಿಲ್ಲ' ಎಂದು ಕೋರ್ಟಿನಿಂದ ಆಚೆಗೆ ಓಡಿ ಹೋದನು!

**ವಿ.ವಿಜಯೇಂದ್ರ ರಾವ್**

## ಸಾಲ ಮರುಪಾವತಿ

ರಮೇಶ ಬ್ಯಾಂಕ್ ಮ್ಯಾನೇಜರ್‌ಗೆ ಫೋನ್ ಮಾಡಿ, 'ಸಾರ್ ನಿಮ್ಮಲ್ಲಿ ನಾವು ಸಾಲ ಮಾಡಿ ಸಕಾಲದಲ್ಲಿ ಕಟ್ಟದಿದ್ದರೆ ನೀವು ಯಾವ ಕ್ರಮ ಕೈಗೊಳ್ಳುತ್ತೀರಿ?' ಎಂದು ಕೇಳಿದ. ಅದಕ್ಕೆ ಮ್ಯಾನೇಜರ್, 'ನಾವು ಯಾವುದಕ್ಕಾಗಿ ಸಾಲ ಕೊಟ್ಟಿದ್ದೇವೆಯೋ ಅದನ್ನು ವಶಕ್ಕೆ ತೆಗೆದುಕೊಳ್ಳುತ್ತೇವೆ. ಕಾರಿಗೆ ಸಾಲ ಕೊಟ್ಟಿದ್ದರೆ ಕಾರು, ಮನೆಗೆ ಸಾಲ ಕೊಟ್ಟಿದ್ದರೆ ಮನೆ...' ಎಂದು ಸ್ಪಷ್ಟಪಡಿಸಿದರು. ಅನಂತರ ಏನೊ ನೆನಪಾಗಿ, 'ಅಂದಹಾಗೆ ನೀವು ಯಾವುದಕ್ಕಾದರೂ ಸಾಲ ಮಾಡಿದ್ದೀರಾ?' ಎಂದಾಗ, ರಮೇಶ, 'ನಾನು ಮದುವೆಗಾಗಿ ಸಾಲ ಮಾಡಿದ್ದೇನೆ ಸರ್' ಎಂದ.

**ಶಂಕರೇಗೌಡ ತುಂಬಕೆರೆ**



ಕಲೆ: ಗಣೇಶ ಆಚಾರ್ಯ